ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-7 Issue-1, July-August 2025, Pp. 61-71
©*IIMRD*, Mysuru
IIMRD JOURNALS
www.iimrd.com

# ವಸತಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ಹಾಗೂ ಭಾವನಾತ್ಮಕ ಹೊಂದಾಣಿಕೆ

**ನಾಗರಾಜ ಟಿ**

ಸಂಶೋಧನಾ ವಿದ್ಯಾರ್ಥಿ, ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

**ಸಾರಾಂಶ: (Abstract)**

*ಶಿಕ್ಷಣವು ವ್ಯಕ್ತಿಯ ಜೀವನವನ್ನು ರೂಪಿಸುವ ಮಹಾಶಕ್ತಿಗಳಲ್ಲಿ ಒಂದಾಗಿದೆ. ಮಾನವನ ಚಟುವಟಿಕೆಗಳಲ್ಲಿ ಶಿಕ್ಷಣಕ್ಕೆ ವಿಶೇಷ ಪ್ರಾಧಾನ್ಯವಿದೆ. ಮಾನವನ ವ್ಯಕ್ತಿತ್ವ ರೂಪುಗೊಳ್ಳುವ ಅವಧಿಯಲ್ಲಿ ಶಿಕ್ಷಣವು ಹೆಚ್ಚು ಪ್ರಭಾವ ಬೀರುತ್ತದೆ. ಅದು ಮಾನವನ ಮನೋಸ್ಥೈರ್ಯಕ್ಕೆ, ಊಹಾಶಕ್ತಿಗೆ ಹಾಗೂ ಜಿಜ್ಞಾಸೆಗೆ ನೂತನ ರೂಪವನ್ನು ತಂದುಕೊಡುತ್ತದೆ. ತಾರುಣ್ಯಾವಸ್ಥೆಯಲ್ಲಿ ವಿದ್ಯಾರ್ಥಿಗಳಿಗೆ ಸೂಕ್ತ ಪರಿಸರವನ್ನು ದೊರಕಿಸಿಕೊಟ್ಟು ನೈತಿಕತೆಯುಳ್ಳ ಒಳ್ಳೆಯ ವಯಸ್ಕರನ್ನಾಗಿ ಮಾಡಬೇಕು. ವಾಸ್ತವವಾಗಿ ಅವರನ್ನು ವ್ಯಕ್ತಿಗಳನ್ನಾಗಿ ಪರಿವರ್ತಿಸಬೇಕಾಗಿದೆ. ಈ ಪ್ರಕ್ರಿಯೆಯೊಳಗೆ ವಿದ್ಯಾರ್ಥಿಗಳು ತಮ್ಮ ಬುದ್ಧಿಶಕ್ತಿಯೊಡನೆ ಉತ್ತಮ ಮೌಲ್ಯಗಳನ್ನು ಅಳವಡಿಸಿಕೊಂಡು ಉನ್ನತ ಶೈಕ್ಷಣಿಕ ಸಾಧನೆಯನ್ನು ಪಡೆದು ಜೀವನದಲ್ಲಿ ತಮ್ಮ ಗುರಿಯಡೆಗೆ ಸಾಗುವುದು ಸೂಕ್ತವಾಗಿದೆ. ಯಾವುದೇ ಒಬ್ಬ ವಿದ್ಯಾರ್ಥಿಯ ಶೈಕ್ಷಣಿಕ ಸಾಧನೆಯು ಉನ್ನತ ಮಟ್ಟಕ್ಕೇರಿದೆ ಎಂದರೆ ತಾವು ಹೊಂದಿದ ಬುದ್ಧಿಶಕ್ತಿ ಹಾಗೂ ಅವರು ಅಳವಡಿಸಿಕೊಂಡ ಮೌಲ್ಯಗಳು ಕಾರಣವಾಗಬಹುದು. ಹಾಗೆಯೇ ಅವರು ದಾಖಲಾದ ಶಾಲೆಯ ಪರಿಸರ ಹಾಗೂ ತಮಗೆ ಸಿಕ್ಕ ಸೌಲಭ್ಯಗಳ ಪ್ರಭಾವದಿಂದ ವ್ಯತ್ಯಾಸ ಕಂಡುಬರಬಹುದು. ಈ ಕಾರಣದಿಂದ ಪ್ರಸ್ತುತ ಶೈಕ್ಷಣಿಕ ಸಂಸ್ಥೆಗಳಲ್ಲಿ ಪ್ರಮುಖವಾಗಿ ವಸತಿ ಶಾಲೆಗಳಲ್ಲಿ ಅಧ್ಯಯನ ಕೈಗೊಂಡು ಆ ವಿದ್ಯಾರ್ಥಿಗಳ ಮೌಲ್ಯಗಳು, ಬುದ್ಧಿಶಕ್ತಿ ಹಾಗೂ ಶೈಕ್ಷಣಿಕ ಸಾಧನೆಗಳು ಹೇಗೆ ಸಂಬಂಧಿಸಿವೆ ಹಾಗೂ ವ್ಯತ್ಯಾಸ ಹೊಂದಿವೆ ಎಂಬುದನ್ನು ತಿಳಿಯಬೇಕಾಗಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಲೇಖನವು ಸಹಾಯಕವಾಗಿದೆ.*

**ಮುಖ್ಯಪದಗಳು (Keywords):** ವಸತಿ ಶಾಲೆ, ವಿದ್ಯಾರ್ಥಿಗಳು, ಭಾವನಾತ್ಮಕ ಬುದ್ಧಿಶಕ್ತಿ. ಸಾಮಾಜಿಕ ನ್ಯಾಯ, ಗುಣಮಟ್ಟದ ಶಿಕ್ಷಣ, ಕಲಿಕೆ, ಪೀರ್ ಗುಂಪು, ಕೌಶಲ್ಯ, ಹೊಂದಾಣಿಕೆ,

## ಪೀಠಿಕೆ

ಪ್ರಾಚೀನ ಭಾರತದ ಶಿಕ್ಷಣದಲ್ಲಿ ಆಶ್ರಮ ಶಿಕ್ಷಣ ಹಾಗೂ ಗುರುಕುಲ ಶಿಕ್ಷಣ ವ್ಯವಸ್ಥೆಗಳು ಹೆಚ್ಚು ಪ್ರಾಮುಖ್ಯತೆಯನ್ನು ಗಳಿಸಿವೆ. ಈ ವ್ಯವಸ್ಥೆಗಳಲ್ಲಿ ಭಾರತೀಯ ಸಮಾಜದ ಮೇಲ್ವರ್ಣಗಳಾದ ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯರು ಮಾತ್ರ ಶಿಕ್ಷಣ ಪಡೆಯುವ ಅವಕಾಶ ಇತ್ತು. ಬ್ರಾಹ್ಮಣರು ಅಧ್ಯಯನ ಅಧ್ಯಾಪನ ಹಾಗೂ ಪುರೋಹಿತ್ಯ ಕಾರ್ಯಗಳನ್ನು ಮಾಡುತ್ತಿದ್ದರು. ಅದೇ ರೀತಿ ಪ್ರಾಚೀನ ಭಾರತದ ವೇದ, ಉಪನಿಷತ್ ಮತ್ತು ಅರಣ್ಯಕಗಳ ಕಾಲದಲ್ಲಿ ಆಶ್ರಮ ಶಿಕ್ಷಣ ವ್ಯವಸ್ಥೆಯನ್ನು ಕಾಣಬಹುದು. ವಿದ್ಯಾರ್ಥಿಗಳ

ಶಿಕ್ಷಣ ಉಪನಯನ ಪದ್ಧತಿ ಮೂಲಕ ಪ್ರಾರಂಭವಾಗುತ್ತಿತ್ತು. ನಂತರ ರಾಜ ಮಹಾರಾಜರ ಕಾಲಾವಧಿಯಲ್ಲಿ ಅಗ್ರಹಾರಗಳು, ಮಠಗಳು ಶೈಕ್ಷಣಿಕ ಕೇಂದ್ರಗಳಾಗಿದ್ದವು. ಹಾಗೆಯೇ ಆಧುನಿಕ ಸಮಾಜದಲ್ಲಿ ಶಿಕ್ಷಣವನ್ನು ನೀಡುವ ಮತ್ತು ಪಡೆಯುವ ಕ್ರಮಗಳು ಹಾಗೂ ರೀತಿ ನೀತಿಗಳು ಬದಲಾದರೂ ಮಕ್ಕಳಿಗೆ ಆಶ್ರಮ ವ್ಯವಸ್ಥೆಯ ಶಿಕ್ಷಣ ಹೋಲುವಂತಹ ಆಧುನಿಕ ಪ್ರಜಾಸತ್ತಾತ್ಮಕ ಕಲ್ಯಾಣ ಸರ್ಕಾರಗಳು ವಸತಿ ಶಾಲೆಗಳನ್ನು ಸ್ಥಾಪಿಸಿವೆ. ಪ್ರಸ್ತುತ ಲೇಖನದಲ್ಲಿ ವಸತಿ ಶಾಲೆಗಳ ಹುಟ್ಟು, ಬೆಳವಣೆಗೆ, ಸ್ವರೂಪ ಮತ್ತು ಮಹತ್ವವನ್ನು ಕುರಿತು ವಿವರಿಸಲಾಗಿದೆ.

ಗುರುಕುಲ ಶಾಲೆ ಅಥವಾ ವಸತಿ ಶಾಲೆಗಳ ಹುಟ್ಟು, ಬೆಳವಣಿಗೆ ಪ್ರಾಚೀನ ಕಾಲದಿಂದ ಬೆಳೆದುಬಂದಿದೆ. ಗುರುಕುಲ ವ್ಯವಸ್ಥೆಯಲ್ಲಿ ಶಿಷ್ಯರು/ವಿದ್ಯಾರ್ಥಿಗಳು ಗುರುಗಳೊಂದಿಗೆ ವಾಸವಾಗಿ ಶಿಕ್ಷಣವನ್ನು ಪಡೆಯುತ್ತಿದ್ದರು. ಅಲ್ಲಿ ವಿದ್ಯಾರ್ಥಿಗಳಿಗೆ ಶಿಕ್ಷಣದ ಜೊತೆ ಊಟ ವಸತಿಗಳನ್ನು ಒದಗಿಸಲಾಗುತ್ತಿತ್ತು. ಹಾಗೂ ವಿದ್ಯಾರ್ಥಿಗಳು ತಮ್ಮ ಸ್ವಕಾರ್ಯಗಳು ತಾವೇ  ಮಾಡಿಕೊಳ್ಳುವ ವ್ಯವಸ್ಥೆ ಇರುತ್ತಿತ್ತು. ನಂತರ ಶಿಷ್ಯರು ಗುರುಗಳ ಸೇವೆ ಮಾಡುತ್ತಿದರು ಇದನ್ನು ಆಶ್ರಮ ವ್ಯವಸ್ಥೆ ಎಂದು ಕರೆಯುತ್ತಿದ್ದರು. ಇಲ್ಲಿ ವಿದ್ಯಾರ್ಥಿಗಳು ಸ್ವಾತಂತ್ರ್ಯತೆಯಿಂದ ತಮಗೆ ಇಷ್ಟ ಬಂದ ವಿಷಯವನ್ನು ಪ್ರೀತಿಪೂರ್ವಕವಾಗಿ ಮತ್ತು ಭಕ್ತಿ ಪೂರ್ವಕವಾಗಿ ಕಲಿಯುತ್ತಿದ್ದರು. ಮಹಾತ್ಮ ಗಾಂಧಿಯವರ ಶೈಕ್ಷಣಿಕ ತತ್ವಶಾಸ್ತ್ರದ ಪ್ರಕಾರ ವಸತಿ ಶಾಲೆ ಅಥವಾ "ಆಶ್ರಮ"ವು "ಮೂಲ ಶಿಕ್ಷಣ"ದ ಮೇಲೆ ಕೇಂದ್ರೀಕರಿಸುತ್ತದೆ. ಇದು ಸಾಮಾಜಿಕವಾಗಿ ಉಪಯುಕ್ತವಾದ ಉತ್ಪಾದಕ ಕರಕುಶಲತೆಯ ಮೂಲಕ ಸ್ವಾವಲಂಬನೆ, ನೈತಿಕತೆ ಅಭಿವೃದ್ಧಿ ಮತ್ತು ಶಿಕ್ಷಣವನ್ನು ಒತ್ತಿ ಹೇಳುತ್ತದೆ. ಈ ವಿಧಾನವು ವಿದ್ಯಾರ್ಥಿಗಳಿಗೆ ಕರಕುಶಲತೆಯನ್ನು ತರಬೇತಿ ನೀಡುವುದು, ಅವರ ನೈತಿಕ ಗುಣ ಮತ್ತು ನಾಗರಿಕ ಪ್ರಜ್ಞೆಯನ್ನು ಅಭಿವೃದ್ಧಿಪಡಿಸಿ ಅವರ ಜೀವನೋಪಾಯವನ್ನು ಗಳಿಸಲು ಕಲಿಸುವುದು ಇದರ ಗುರಿಯಾಗಿದೆ. ಪಠ್ಯಕ್ರಮವು ಸಾಮಾನ್ಯ ಜ್ಞಾನದ ಆಧಾರದ ಮೇಲೆ ಚಿಕ್ಕ ಮಕ್ಕಳಿಗೆ ಸಹ–ಶಿಕ್ಷಣ ಮತ್ತು ಸಮಗ್ರ ಸ್ವಾವಲಂಬಿ ವ್ಯಕ್ತಿತ್ವವನ್ನು ಬೆಳೆಸಲು ಮಾತೃಭಾಷೆಯಲ್ಲಿ ಬೋಧನೆಯು ಒಳಗೊಂಡಿರಬೇಕು ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಇಂತಹ ಆಶ್ರಮ ವ್ಯವಸ್ಥೆಯನ್ನು ಹೋಲುವಂತೆ ಪ್ರಜಾಸತ್ತಾತ್ಮಕ ಸರ್ಕಾರಗಳು ಸಾಮಾಜಿಕ ನ್ಯಾಯದಡಿಯಲ್ಲಿ ಭಾರತ ಸಂವಿಧಾನದ ಆಶಯದಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನವೋದಯ ಹಾಗೂ ಏಕಲವ್ಯ, ಮೊರಾರ್ಜಿ ದೇಸಾಯಿ, ಕಿತ್ತೂರುರಾಣಿ ಚೆನ್ನಮ್ಮ, ಡಾ. ಬಿ.ಆರ್. ಅಂಬೇಡ್ಕರ್, ಇಂದಿರಾ ಗಾಂಧಿ ವಸತಿ ಶಾಲೆಗಳನ್ನು ಪ್ರಾರಂಭಿಸಿವೆ. ಅವುಗಳಲ್ಲಿ ಕೇಂದ್ರ ಸರ್ಕಾರ ಹೊಸ ಶಿಕ್ಷಣ ನೀತಿಯ ಶಿಫಾರಸ್ಸಿನ ಅನ್ವಯ 1986ರಲ್ಲಿ ಪ್ರಥಮ ಬಾರಿಗೆ ನವೋದಯ ವಸತಿ ಶಾಲೆಗಳನ್ನು ಪ್ರಾರಂಭಿಸಿದೆ. ದೇಶದಲ್ಲಿ ಪ್ರತಿ ಜಿಲ್ಲೆಗೆ ಒಂದರಂತೆ ಒಟ್ಟು 661 ಶಾಲೆಗಳನ್ನು ಪ್ರತಿಭಾನ್ವಿತ ವಿದ್ಯಾರ್ಥಿಗಳಿಗಾಗಿ ವಿಶೇಷ ಶಾಲೆಗಳನ್ನು ಸ್ಥಾಪಿಸಿದೆ. ಜವಹಾರ ನವೋದಯ ವಸತಿ ಶಾಲೆಗಳನ್ನು ನವೋದಯ ವಿದ್ಯಾಲಯ ಸಮಿತಿ ಸಂಸ್ಥೆಯು, ಕೇಂದ್ರ ಸರ್ಕಾರದ ಮಾನವ ಅಭಿವೃದ್ಧಿ ಸಂಪನ್ಮೂಲ ಇಲಾಖೆಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿವೆ. ಈ ವಸತಿ ಶಾಲೆಗಳಿಗೆ ಆರನೇ ತರಗತಿಗೆ ಪ್ರವೇಶಾತಿಯನ್ನು ಪಡೆಯುತ್ತಾರೆ. ಇದೆ ಮಾದರಿಯಲ್ಲಿ ಕರ್ನಾಟಕ ಸರ್ಕಾರವು ಇದಾದ ಹತ್ತು ವರ್ಷಗಳ ನಂತರ ರಾಜ್ಯದಲ್ಲಿ 1996–97 ರಲ್ಲಿ

ಪ್ರಥಮ ಬಾರಿಗೆ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಸ್ಥಾಪಿಸಿದೆ. ತದನಂತರದಲ್ಲಿ 2005, 2007, 2009, 2010, 2015, 2017, 2025ನೇ ಸಾಲಿನಲ್ಲಿ ಕೆಲವು ಶಾಲೆಗಳನ್ನು ಸ್ಥಾಪಿಸಿದೆ. ಇಂದು ರಾಜ್ಯದಲ್ಲಿ ಒಟ್ಟು 832 ಶಾಲಾ ಕಾಲೇಜುಗಳ ಕಾರ್ಯನಿರ್ವಹಿಸುತ್ತಿವೆ. ಇವು ಸಮಾಜ ಕಲ್ಯಾಣ ಇಲಾಖೆ ಅಧೀನ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಬೆಂಗಳೂರು, ಕೆಲವು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗಳ ಅಡಿಯಲ್ಲಿ ವಸತಿ ಶಾಲೆಗಳು ನವೋದಯ ಮಾದರಿಯಲ್ಲಿ ಆರನೇ ತರಗತಿಯ ಪ್ರವೇಶವನ್ನು ಪ್ರವೇಶ ಪರೀಕ್ಷೆಯ ಮೂಲಕ ಮತ್ತು ಕೆಲವು ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದ ಮಕ್ಕಳಿಗೆ, ತಂದೆತಾಯಿ ಇಲ್ಲದ ಮಕ್ಕಳನ್ನು ಶಿಕ್ಷಣವಾಹಿನಿಗೆ ತರಲು ವಿಶೇಷ ಮೀಸಲಾತಿ ಅಡಿಯಲ್ಲಿ ಪ್ರವೇಶವನ್ನು ನೀಡಲಾಗುತ್ತದೆ.

**ವಸತಿ ಶಾಲೆಗಳ ಗುಣಲಕ್ಷಣಗಳು**

ವಸತಿ ಶಾಲಾ ಕ್ಯಾಂಪಸ್‌ನಲ್ಲಿ ವಿದ್ಯಾರ್ಥಿಗಳು ವಾಸಿಸಲು ಅವಕಾಶವಿರುತ್ತದೆ. ಆದ್ದರಿಂದ ವಿದ್ಯಾರ್ಥಿಗಳು ಶಾಲಾ ಆವರಣದಲ್ಲಿರುವ ಹಾಸ್ಟೆಲ್‌ಗಳು ಅಥವಾ ವಸತಿ ನಿಲಯಗಳಲ್ಲಿ ವಾಸಿಸುತ್ತಾರೆ. ಇದು ಅವರ ನಿರಂತರ ಕಲಿಕೆ ಮತ್ತು ಸ್ನೇಹ, ಸಹಕಾರ, ಸಹಬಾಳ್ವೆಯಂತಹ ಮೌಲ್ಯ ಬೆಳೆಸಿ ಜೀವನ ಅನುಭವವನ್ನು ನೀಡುತ್ತದೆ.

ವಸತಿ ಶಾಲೆಗಳು ಮಕ್ಕಳ ಸರ್ವಾಂಗೀಣ  ಅಭಿವೃದ್ಧಿಗೆ ಒತ್ತನ್ನು ನೀಡುತ್ತವೆ. ವಸತಿ ಶಾಲೆಗಳು ಒಟ್ಟಾರೆ ಬೆಳವಣಿಗೆಯನ್ನು ಗುರಿಯಾಗಿಟ್ಟುಕೊಂಡು ಮಗುವಿನ ಮಾನಸಿಕ, ದೈಹಿಕ ಮತ್ತು ಭಾವನಾತ್ಮಕ ಯೋಗಕ್ಷೇಮವನ್ನು ನೀಡಲು ಶಿಕ್ಷಣವನ್ನು ಮೀರಿ ಗಮನ ಹರಿಸಲಾಗುತ್ತದೆ.

ಶಾಲೆಗಳು ರಚನಾತ್ಮಕ ದಿನಚರಿಯನ್ನು ಹೊಂದಿರುತ್ತವೆ. ಅವು ದೈನಂದಿನ ವೇಳಾಪಟ್ಟಿಯಲ್ಲಿ ಮುಂಜಾನೆ ಏಳುವುದರಿಂದ ಹಿಡಿದು ಅಧ್ಯಯನ ಸಮಯಗಳು, ಆಟ-ಪಾಠಗಳು ಮತ್ತು ಪಠ್ಯೇತರ ಚಟುವಟಿಕೆಗಳು ಸೇರಿವೆ. ನಂತರ ಇದು ಶಿಸ್ತು ಮತ್ತು ಸಮಯ ನಿರ್ವಹಣೆಯನ್ನು ಅಭಿವೃದ್ಧಿಪಡಿಸಲು ಸಹಾಯ ಮಾಡುತ್ತದೆ. ವಸತಿ ಶಾಲೆಗಳು ವಿದ್ಯಾರ್ಥಿಗಳ ಅಧ್ಯಯನಕ್ಕೆ ಬೇಕಾದ ಸಮಗ್ರ ಸೌಲಭ್ಯಗಳನ್ನು ಒದಗಿಸುತ್ತವೆ. ವಸತಿ ಶಾಲೆಗಳು ಕ್ಯಾಂಪಸ್‌ನಲ್ಲಿ ವಸತಿ ನಿಲಯ, ಶಾಲಾ ಸಂಕೀರ್ಣ, ಊಟದ ಸಭಾಂಗಣಗಳು, ಕ್ರೀಡಾ ಸೌಲಭ್ಯಗಳು ಮತ್ತು ವಿಜ್ಞಾನ ಪ್ರಯೋಗಾಲಯಗಳನ್ನು ಒದಗಿಸುತ್ತವೆ, ಇದು ವಿದ್ಯಾರ್ಥಿಗಳು ಕಲಿಕೆ ಮತ್ತು ಮನರಂಜನೆಗಾಗಿ ಅಗತ್ಯವಾದ ಸಂಪನ್ಮೂಲಗಳಿಗೆ ಪ್ರವೇಶವನ್ನು ಹೊಂದಿದೆ ಎಂದು ಖಚಿತಪಡಿಸುತ್ತದೆ.

ಶಾಲೆಗಳು ವಿಶೇಷ ವಸತಿ ಶಾಲೆಗಳಾಗಿರುವುದರಿಂದ ಸಮರ್ಪಿತ ಸಿಬ್ಬಂದಿ ಹೊಂದಿವೆ. ಶಿಕ್ಷಕರು, ಸಿಬ್ಬಂದಿ ಮತ್ತು ಸಲಹೆಗಾರರು ನಿಯಮಿತ ಶಾಲಾ ಸಮಯವನ್ನು ಮೀರಿ ಶೈಕ್ಷಣಿಕ ಮಾರ್ಗದರ್ಶನ, ಭಾವನಾತ್ಮಕ ಬೆಂಬಲ ಮತ್ತು ಮೇಲ್ವಿಚಾರಣೆಯನ್ನು ಒದಗಿಸಲು ಸ್ಥಳದಲ್ಲೇ ಇರುತ್ತಾರೆ. ವಸತಿ ಶಾಲೆಗಳು ವಿದ್ಯಾರ್ಥಿಗಳ ಜೀವನ ಕೌಶಲ್ಯಗಳಿಗೆ ಒತ್ತು ನೀಡುತ್ತವೆ. ಇಲ್ಲಿ ವಿದ್ಯಾರ್ಥಿಗಳು ತಮ್ಮ ಗೆಳೆಯರು ಮತ್ತು ಸಿಬ್ಬಂದಿಗಳೊಂದಿಗಿನ ಸಂವಹನದ ಮೂಲಕ ಸ್ವಾವಲಂಬನೆ, ಜವಾಬ್ದಾರಿ, ತಂಡದ ಕೆಲಸ ಮತ್ತು ಸಹಾನುಭೂತಿಯಂತಹ ಪ್ರಮುಖ ಜೀವನ ಕೌಶಲ್ಯಗಳನ್ನು ಕಲಿಯುತ್ತಾರೆ.

ಈ ಶಾಲೆಗಳು ಸುಸಜ್ಜಿತ ಕಟ್ಟಡ ವ್ಯವಸ್ಥೆ ಹೊಂದಿ ವಿದ್ಯಾರ್ಥಿಗಳಿಗೆ ಹೆಚ್ಚು ಸುರಕ್ಷತೆ ಮತ್ತು ಭದ್ರತೆ ಒದಗಿಸುತ್ತವೆ. ಇಲ್ಲಿ ವಿದ್ಯಾರ್ಥಿಗಳಿಗೆ ಸುರಕ್ಷಿತ ಮತ್ತು ಸಂರಕ್ಷಿತ ವಾತಾವರಣವನ್ನು ಒದಗಿಸಲು ವಸತಿ ಶಾಲೆಗಳು ಹೆಚ್ಚಾಗಿ ಕಣ್ಗಾವಲು ಮತ್ತು ಭದ್ರತಾ ಸಿಬ್ಬಂದಿ ಸೇರಿದಂತೆ ವರ್ಧಿತ ಭದ್ರತಾ ಕ್ರಮಗಳನ್ನು ಹೊಂದಿರುತ್ತವೆ. ಶಾಲೆಗಳಲ್ಲಿ ಅನೇಕ ಭಾಗಗಳಿಂದ ಬಂದ ವಿದ್ಯಾರ್ಥಿಗಳು ಒಂದೆಡೆ ಸೇರಿ ಸಮುದಾಯ ಮತ್ತು ಸಾಮಾಜಿಕ ಅಭಿವೃದ್ಧಿಯನ್ನು ಹೊಂದಿರುತ್ತವೆ. ಈ ರೀತಿಯಾಗಿ ಒಟ್ಟಿಗೆ ವಾಸಿಸುವುದು ಸಮುದಾಯದ ಬಲವಾದ ಪ್ರಜ್ಞೆಯನ್ನು ಬೆಳೆಸುತ್ತದೆ, ಸಾಮಾಜಿಕ ಸಂವಹನ, ತಂಡದ ಕೆಲಸ ಮತ್ತು ಸಾಮಾಜಿಕ ಕೌಶಲ್ಯಗಳ ಅಭಿವೃದ್ಧಿಯನ್ನು ಪ್ರೋತ್ಸಾಹಿಸುತ್ತವೆ.

**ವಸತಿ ಶಾಲೆಗಳ ಉದ್ದೇಶಗಳು**

ಈ ವಸತಿ ಶಾಲೆಗಳು ಕೆಲವೊಂದು ನಿರ್ದಿಷ್ಟ ಉದ್ದೇಶಗಳನ್ನು ಹೊಂದಿವೆ. ಕರ್ನಾಟಕ ಸರ್ಕಾರ ಸ್ಥಾಪಿಸಿದ ವಸತಿ ಶಾಲೆಗಳ ಮುಖ್ಯ ಉದ್ದೇಶಗಳು ಗುಣಮಟ್ಟದ ಶಿಕ್ಷಣವನ್ನು ಒದಗಿಸುವುದು, ಸಮಗ್ರ ಅಭಿವೃದ್ಧಿಗೆ ಪೂರಕ ವಾತಾವರಣ ಕಲ್ಪಿಸುವುದು ಮತ್ತು ಅನಾನುಕೂಲಕರ ಅಥವಾ ದೂರದ ಪ್ರದೇಶಗಳ ವಿದ್ಯಾರ್ಥಿಗಳಿಗೆ ಶಿಕ್ಷಣದ ಪ್ರವೇಶವನ್ನು ಖಚಿತಪಡಿಸುವುದು. ಈ ಶಾಲೆಗಳು ವಿದ್ಯಾರ್ಥಿಗಳಲ್ಲಿ ಶೈಕ್ಷಣಿಕ ಅವಧಾನ, ವೈಯಕ್ತಿಕ ಬೆಳವಣಿಗೆ ಮತ್ತು ಸಾಮಾಜಿಕ ಜವಾಬ್ದಾರಿಯನ್ನು ಉತ್ತೇಜಿಸುವ ಪೋಷಣೆಯ ವಾತಾವರಣವನ್ನು ಸೃಷ್ಟಿಸುವ ಗುರಿಯನ್ನು ಹೊಂದಿವೆ. ಉದ್ದೇಶಗಳ ಹೆಚ್ಚಿನ ವಿವರವನ್ನು ಮುಂದಿನಂತೆ ನೀಡಲಾಗಿದೆ.

**ಗುಣಮಟ್ಟದ ಶಿಕ್ಷಣವನ್ನು ಒದಗಿಸುವುದು**

ವಸತಿ ಶಾಲೆಗಳು ಉತ್ತಮ ಗುಣಮಟ್ಟದ ಶಿಕ್ಷಣ ನೀಡಿ ಶೈಕ್ಷಣಿಕ ಶ್ರೇಷ್ಠತೆಯನ್ನು ಹೊಂದುವ ಉದ್ದೇಶ ಹೊಂದಿವೆ. ವಸತಿ ಶಾಲೆಗಳು ಉತ್ತಮ ಶೈಕ್ಷಣಿಕ ಅರ್ಹತೆ ಇರುವ ಶಿಕ್ಷಕರು ಮತ್ತು ಸಂಪನ್ಮೂಲಗಳೊಂದಿಗೆ ರಚನಾತ್ಮಕ ಕಲಿಕಾ ವಾತಾವರಣವನ್ನು ಕಲ್ಪಿಸಿವೆ. ಶೈಕ್ಷಣಿಕ ಕಾರ್ಯಕ್ಷಮತೆಯನ್ನು ಸುಧಾರಿಸುವ ಮತ್ತು ಉನ್ನತ ಶಿಕ್ಷಣಕ್ಕಾಗಿ ವಿದ್ಯಾರ್ಥಿಗಳನ್ನು ಸಿದ್ಧಪಡಿಸುವ ಗುರಿಯನ್ನು ಹೊಂದಿವೆ. ಇಲ್ಲಿ ಸರ್ಕಾರಿ ಶಾಲೆಗಳಿಗಿಂತ ವಿಭಿನ್ನವಾಗಿರುವ ಶೈಕ್ಷಣಿಕ ಕಾರ್ಯಚಟುವಟಿಕೆಗಳನ್ನು ಆಯೋಜಿಸಲಾಗುತ್ತದೆ.

ವಸತಿ ಶಾಲೆಗಳು ಪಠ್ಯಕ್ರಮ ಪುಷ್ಟೀಕರಣಕ್ಕೆ ಒತ್ತು ನೀಡಿ ಸಾಂಪ್ರದಾಯಿಕ ತರಗತಿಯ ವ್ಯವಸ್ಥೆಯನ್ನು ಮೀರಿದ ಸುಸಜ್ಜಿತ ಶಿಕ್ಷಣವನ್ನು ಒದಗಿಸಲು ಅವು ಸ್ಮಾರ್ಟ್ ಕ್ಲಾಸ್‌ಗಳನ್ನು ಹೊಂದಿವೆ. ಸಾಮಾನ್ಯವಾಗಿ ಪಠ್ಯೇತರ ಚಟುವಟಿಕೆಗಳು, ಕ್ರೀಡೆಗಳು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಂಯೋಜಿಸುತ್ತವೆ. ಇವು ವಿದ್ಯಾರ್ಥಿಗಳ ವೈಯಕ್ತಿಕ ಕಲಿಕೆಗೆ ಅವಕಾಶ ಮಾಡಿಕೊಡುತ್ತವೆ. ನಂತರ ಕೆಲವು ವಸತಿ ಶಾಲೆಗಳು ಕಲಿಕಾ ನ್ಯೂನತೆ ಹೊಂದಿರುವ ವಿದ್ಯಾರ್ಥಿಗಳು ಅಥವಾ ಅಂಚಿನಲ್ಲಿರುವ ಸಮುದಾಯಗಳಂತಹ ವಿದ್ಯಾರ್ಥಿಗಳಿಗೆ ನಿರ್ದಿಷ್ಟ ಅಗತ್ಯಗಳನ್ನು ಪೂರೈಸುತ್ತವೆ, ಸೂಕ್ತವಾದ ಬೆಂಬಲ ಮತ್ತು ಸಂಪನ್ಮೂಲಗಳನ್ನು ಒದಗಿಸುತ್ತವೆ. ವಸತಿ ಶಾಲೆಗಳು ವಿದ್ಯಾರ್ಥಿಗಳಿಗೆ ಗುಂಪು ಅಧ್ಯಯನಕ್ಕೆ ತುಂಬಾ ಅನುಕೂಲಕರವಾಗಿರುತ್ತದೆ. ಏಕೆಂದರೆ ವಿದ್ಯಾರ್ಥಿಗಳು ವಸತಿ ನಿಲಯಗಳಲ್ಲಿರುವುದರಿಂದ ತಮ್ಮ ಬಿಡುವಿನ ಸಂದರ್ಭದಲ್ಲಿ ತಮ್ಮ ಪೀರ್ ಗುಂಪುಗಳಲ್ಲಿ ಅಧ್ಯಯನದಲ್ಲಿ ತೊಡಗುವಂತೆ ಪ್ರೇರೆಪಿಸುತ್ತವೆ.

**ಸಮಗ್ರ ಅಭಿವೃದ್ಧಿಯನ್ನು ಪೋಷಿಸುವುದು**

ಈ ಶಾಲೆಗಳು ವಿದ್ಯಾರ್ಥಿಗಳ ಸಮಗ್ರ ಅಭಿವೃದ್ಧಿಯನ್ನು ಪೋಷಿಸಲು ಉತ್ತಮ ಪಾತ್ರ ನಿರ್ವಹಿಸುತ್ತವೆ. ಹಾಗೆಯೇ ವಸತಿ ಶಾಲೆಗಳು ವಿದ್ಯಾರ್ಥಿಗಳ ವ್ಯಕ್ತಿತ್ವದ ವಿಕಾಸಕ್ಕೆ ಒತ್ತು ನೀಡುತ್ತವೆ. ಶಿಸ್ತು, ಜವಾಬ್ದಾರಿ ಮತ್ತು ಇತರರಿಗೆ ಗೌರವದಂತಹ ಮೌಲ್ಯಗಳನ್ನು ತುಂಬುತ್ತವೆ. ಸಮಯಪ್ರಜ್ಞೆ, ನಾಯಕತ್ವ ಗುಣ ಬೆಳೆಸುತ್ತವೆ. ಶಿಸ್ತು ಬದ್ಧ ಜೀವನ ಗೌರವಯುತ ನೈತಿಕ ಮೌಲ್ಯಗಳಾದ ಸತ್ಯ, ಪ್ರಾಮಾಣಿಕತೆ, ನಿಷ್ಠೆ ಜೀವನ ರೂಪಿಸುತ್ತವೆ.

ನಂತರ ಇವು ಸಾಮಾಜಿಕ ವ್ಯವಸ್ಥೆಗಳಲ್ಲಿ ಶಿಕ್ಷಣ ವಂಚಿತ ಸಮಾಜದ ಎಲ್ಲಾ ವರ್ಗ, ಜಾತಿಗಳು ಒಟ್ಟಿಗೆ ವಾಸಿಸುವುದು ಮತ್ತು ಕಲಿಯುವುದು. ವಿದ್ಯಾರ್ಥಿಗಳು ಗುಂಪು ಕೆಲಸ, ಸಂವಹನ ಮತ್ತು ಸಂಘರ್ಷ ಪರಿಹಾರ ಸೇರಿದಂತೆ ಅಗತ್ಯ ಸಾಮಾಜಿಕ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು ಸಹಾಯ ಮಾಡುತ್ತವೆ. ಪ್ರಜಾಪ್ರಭುತ್ವದ ಮೌಲ್ಯಗಳಾದ ಸ್ವಾತಂತ್ರ್ಯ, ಸಾಮಾನತೆ, ಭ್ರಾತೃತ್ವದ ಬೆಳವಣಿಗೆ ನೆರವಾಗುತ್ತವೆ. ಅದೇ ರೀತಿಯಾಗಿ ವಸತಿ ಶಾಲೆಗಳು ವಿದ್ಯಾರ್ಥಿಗಳ ದೈಹಿಕ ಮತ್ತು ಮಾನಸಿಕ ಯೋಗಕ್ಷೇಮವನ್ನು ಒಳಗೊಂಡಿರುತ್ತವೆ. ದೈಹಿಕ ಮತ್ತು ಮಾನಸಿಕ ಯೋಗಕ್ಷೇಮವನ್ನು ಉತ್ತೇಜಿಸಲು ಅನೇಕ ವಸತಿ ಶಾಲೆಗಳಲ್ಲಿ ಕ್ರೀಡಾ ಸೌಲಭ್ಯಗಳು, ಆರೋಗ್ಯಕರ ಊಟ ಮತ್ತು ನಿಯಮಿತ ಆರೋಗ್ಯ ತಪಾಸಣೆ ಶಿಬಿರಗಳನ್ನು ಏರ್ಪಡಿಸಲಾಗುತ್ತದೆ. ವಿದ್ಯಾರ್ಥಿಗಳಿಗೆ ವಸತಿ ಶಾಲೆಗಳಲ್ಲಿ ಪ್ರತ್ಯೇಕವಾದ ಆಟದ ಮೈದಾನಗಳು ಇರುವುದರಿಂದ ಕ್ರೀಡೆಗೆ ಹೆಚ್ಚಿನ ಆದ್ಯತೆಯನ್ನು ನೀಡಲಾಗುತ್ತದೆ. ಹಾಗಾಗಿ ವಿದ್ಯಾರ್ಥಿಗಳಲ್ಲಿ ದೈಹಿಕವಾಗಿ ಸಧೃಡ ಬೆಳವಣಿಗೆಗೆ ಒತ್ತು ನೀಡಲಾಗುತ್ತದೆ. ನಂತರ ಅವರ ಮಾನಸಿಕ ಯೋಗ ಕ್ಷೇಮಕ್ಕೂ ಅಷ್ಟೆ ಗಮನ ನೀಡಲಾಗುತ್ತದೆ.

**ಶಿಕ್ಷಣಕ್ಕೆ ಪ್ರವೇಶವನ್ನು ಖಚಿತಪಡಿಸುವುದು**

ಶಿಕ್ಷಣ ಕಲಿಕೆಗೆ ಅನಾನುಕೂಲ ವಾತಾವರಣವನ್ನು ಹೊಂದಿದ ವಿದ್ಯಾರ್ಥಿಗಳಿಗೆ ವಸತಿ ಶಾಲೆಗಳಿಗೆ ಪ್ರವೇಶವನ್ನು ನೀಡಲು ಬೆಂಬಲಿಸುತ್ತವೆ. ನಂತರ ಆರ್ಥಿಕವಾಗಿ ಮತ್ತು ಸಾಮಾಜಿಕ ದುರ್ಬಲ ವರ್ಗಗಳ ಮಕ್ಕಳಿಗೆ, ವಿಶೇಷ ಅಗತ್ಯವುಳ್ಳವರಿಗೆ ಅಥವಾ ದುರ್ಬಲ ಹಿನ್ನೆಲೆಯಿಂದ ಬಂದವರಿಗೆ ತಂದೆ ತಾಯಿ ಇಲ್ಲದ ಮಕ್ಕಳಿಗೆ ಶಿಕ್ಷಣವನ್ನು ಒದಗಿಸುವಲ್ಲಿ ವಸತಿ ಶಾಲೆಗಳು ನಿರ್ಣಾಯಕ ಪಾತ್ರ ವಹಿಸುತ್ತವೆ. ವಿಶೇಷವಾಗಿ ಈ ವಸತಿ ಶಾಲೆಗಳಿಗೆ ವಿಶೇಷ ಮೀಸಲಾತಿ ಸೌಲಭ್ಯದ ಅಡಿಯಲ್ಲಿ ಆರನೆಯ ತರಗತಿಗೆ ಪ್ರವೇಶವನ್ನು ಕಲ್ಪಿಸಲಾಗುತ್ತದೆ. ಇವು ವಸತಿಶಾಲೆಗಳಾದ್ದರಿಂದ ವಿದ್ಯಾರ್ಥಿಗಳು ಮಧ್ಯಂತರದಲ್ಲಿ ಶಾಲೆ ಬಿಡುವ ಪ್ರಮಾಣವನ್ನು ಕಡಿಮೆಗೊಳಿಸುತ್ತವೆ. ವಸತಿ ಶಾಲೆಗಳು ಸುರಕ್ಷಿತ ಮತ್ತು ಬೆಂಬಲಿತ ವಾತಾವರಣವನ್ನು ಒದಗಿಸುವ ಮೂಲಕ, ಶಾಲೆ ಬಿಡುವ ಮಕ್ಕಳ ಸಂಖ್ಯಾದರವನ್ನು ಕಡಿಮೆ ಮಾಡಲು ಮತ್ತು ವಿದ್ಯಾರ್ಥಿಗಳು ತಮ್ಮ ಶಿಕ್ಷಣ ಪೂರ್ಣಗೊಳಿಸುವುದನ್ನು ಖಚಿತಪಡಿಸಿಕೊಳ್ಳಲು ಸಹಾಯ ಮಾಡುತ್ತವೆ. ಇಲ್ಲಿ ಮಕ್ಕಳ ಮನಸ್ಸನ್ನು ಆಕರ್ಷಿಸುವ ವಾತಾವರಣವನ್ನು ನಿರ್ಮಾಣ ಮಾಡಲಾಗುತ್ತದೆ.

ವಸತಿ ಶಾಲೆಗಳು ಬಾಲಕಿಯರ ಶಿಕ್ಷಣಕ್ಕೆ ಆದ್ಯತೆ ನೀಡುತ್ತವೆ. ಡಿ.ಎಂ. ನಂಜುಂಡಪ್ಪ ವರದಿಯಿಂದಾಗಿ ಹೆಣ್ಣು ಮಕ್ಕಳಿಗೆ 114 ವಸತಿ ಶಾಲೆಗಳನ್ನು ತೆರೆಯಲಾಯಿತು. ಇಲ್ಲಿ ವಿಶೇಷವಾಗಿ ಬಾಲಕಿಯರ ಶಿಕ್ಷಣಕ್ಕೆ ಆದ್ಯತೆ ನೀಡಲು ಪ್ರತ್ಯೇಕ ಬಾಲಕಿಯರ ವಸತಿ ಶಾಲೆಗಳನ್ನು ಸ್ಥಾಪಿಸಲಾಗಿದೆ. ನಂತರ ಈ ವಸತಿ ಶಾಲೆಗಳಲ್ಲಿ

ಬಾಲಕಿಯರಿಗೆ ಶಿಕ್ಷಣದ ಜೊತೆಗೆ ಆತ್ಮರಕ್ಷಣಾ ಕಲೆಯಾದ ಕರಾಟೆಯನ್ನು ಕಲಿಸಲಾಗುತ್ತದೆ. ಇದು ಬಾಲಕಿಯರಲ್ಲಿ ಆತ್ಮವಿಶ್ವಾಸದ ಜೊತೆ ಧೈರ್ಯದ ಮನೋಭಾವನೆ ಮತ್ತು ಸ್ವಾವಲಂಬನೆಯನ್ನು ಉಂಟುಮಾಡುತ್ತದೆ. ಈ ವಸತಿ ಶಾಲೆಗಳು ಪೋಷಕರಿಗೆ ತಮ್ಮ ಮಕ್ಕಳ ಸಂರಕ್ಷಣೆಗೆ ಭರವಸೆ ಮತ್ತು ನಂಬಿಕೆಯನ್ನು ಹೊಂದಿವೆ. ಇದು ಶಾಲೆಯಿಂದ ದೂರ ಉಳಿಯುವ ಎಷ್ಟೋ ವಿದ್ಯಾರ್ಥಿನಿಯರಿಗೆ ಶಾಲಾಶಿಕ್ಷಣ ಮತ್ತು ಉನ್ನತ ಶಿಕ್ಷಣ ಪಡೆಯಲು ಪ್ರೇರೆಪಿಸುವ ಉದ್ದೇಶವನ್ನು ಹೊಂದಿವೆ.

**ವೈವಿಧ್ಯತೆ ಮತ್ತು ಸೇರ್ಪಡೆಯನ್ನು ಉತ್ತೇಜಿಸುವುದು**

ವಿಶೇಷವಾಗಿ ವಸತಿಶಾಲೆಗಳು ವೈವಿಧ್ಯತೆಯಿಂದ ಕೂಡಿರುತ್ತವೆ. ಈ ವಸತಿ ಶಾಲೆಗಳು ಸಾಮಾನ್ಯವಾಗಿ ವೈವಿಧ್ಯಮಯ ಸಾಮಾಜಿಕ–ಆರ್ಥಿಕ ಹಿನ್ನೆಲೆಯ ವಿದ್ಯಾರ್ಥಿಗಳಲ್ಲಿ ಪರಸ್ಪರ ಸಂವಹನ ನಡೆಸಲು ಮತ್ತು ಗೌರವಿಸಲು ಉತ್ತಮ ಕಲಿಯುವ ವಾತಾವರಣವನ್ನು ಬೆಳೆಸುವ ಉದ್ದೇಶ ಹೊಂದಿರುತ್ತವೆ. ವಿದ್ಯಾರ್ಥಿಗಳು ವಿವಿಧ ಹಳ್ಳಿ ಪಟ್ಟಣ ನಗರಗಳಿಂದ ಬಂದವರಾಗಿದ್ದು ಪ್ರಾದೇಶಿಕ ವಿಭಿನ್ನತೆ, ವಿವಿಧ ಭಾಷಾ ಭಿನ್ನತೆ ವಿವಿಧ ಸಾಂಸ್ಕೃತಿಕ ಆಚರಣೆಯನ್ನು ಹೊಂದಿರುತ್ತಾರೆ. ಇವರಲ್ಲಿ ಭಾವೈಕ್ಯತೆಯ ಕಲಿಕೆಯಲ್ಲಿ ತೊಡಗಿಸುವುದು ಕಂಡುಬರುತ್ತದೆ. ಇಲ್ಲಿ ಅನೇಕ ಸಹ–ಶೈಕ್ಷಣಿಕ ಚಟುವಟಿಕೆಗಳು ಹೊಂದಿರುತ್ತವೆ. ಆದ್ದರಿಂದ ವಸತಿ ಶಾಲೆಗಳು ಸಹ–ಶೈಕ್ಷಣಿಕವಾಗಿದ್ದು, ವಿದ್ಯಾರ್ಥಿಗಳಿಗೆ ವಿವಿಧ ಲಿಂಗಗಳ ವ್ಯಕ್ತಿಗಳೊಂದಿಗೆ ಸಂವಹನ ನಡೆಸಲು ಮತ್ತು ಅವರಿಂದ ಕಲಿಯಲು ಅವಕಾಶಗಳನ್ನು ಒದಗಿಸುತ್ತವೆ, ವೈವಿಧ್ಯಮಯ ಸಮಾಜ ಜೀವನಕ್ಕೆ ಅವರನ್ನು ಸಿದ್ಧಪಡಿಸುತ್ತವೆ. ನಂತರ ಅವು ಮೂಲಭೂತವಾಗಿ ಕರ್ನಾಟಕದ ವಸತಿ ಶಾಲೆಗಳು ವಿದ್ಯಾರ್ಥಿಗಳು ಶೈಕ್ಷಣಿಕ ಯಶಸ್ಸನ್ನು ಸಾಧಿಸಲು, ಅವರ ಸಂಪೂರ್ಣ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಲು ಮತ್ತು ಸಮಾಜದ ಜವಾಬ್ದಾರಿಯುತ ಮತ್ತು ಕೊಡುಗೆ ನೀಡುವ ಸದಸ್ಯರಾಗಲು ಅನುವು ಮಾಡಿಕೊಡುವ ಪೋಷಣೆ ಮತ್ತು ಉತ್ತೇಜಕ ವಾತಾವರಣವನ್ನು ಒದಗಿಸುವ ಗುರಿಯನ್ನು ಹೊಂದಿವೆ.

**ವಸತಿ ಶಾಲೆಗಳ ಮಹತ್ವ**

ಈ ಮೇಲಿನ ಉದ್ದೇಶಗಳಂತೆ ವಸತಿ ಶಾಲೆಗಳು ಮಹತ್ವವನ್ನು ಹೊಂದಿವೆ. ಅವುಗಳೆಂದರೆ ಶೈಕ್ಷಣಿಕ ಶ್ರೇಷ್ಠತೆ, ವೈಯಕ್ತಿಕ ಬೆಳವಣಿಗೆ ಮತ್ತು ಸ್ವಾತಂತ್ರ್ಯವನ್ನು ಬೆಳೆಸುವ ರಚನಾತ್ಮಕ, ಶಿಸ್ತಿನ ವಾತಾವರಣವನ್ನು ವಿದ್ಯಾರ್ಥಿಗಳಿಗೆ ಒದಗಿಸುತ್ತವೆ. ನಂತರ ಇವು ಶೈಕ್ಷಣಿಕ, ಪಠ್ಯೇತರ ಚಟುವಟಿಕೆಗಳು ಮತ್ತು ಜೀವನ ಕೌಶಲ್ಯಗಳನ್ನು ಒಳಗೊಂಡಂತೆ ಸಮಗ್ರ ಅಭಿವೃದ್ಧಿಯ ಮೇಲೆ ಕೇಂದ್ರೀಕರಿಸಿ ವಿಶಿಷ್ಟವಾದ ಕಲಿಕಾ ಅನುಭವವನ್ನು ನೀಡುತ್ತವೆ. ಈ ವಸತಿ ಶಾಲೆಗಳ ಮಹತ್ವ ಕುರಿತು ಹೆಚ್ಚಿನ ವಿವರವನ್ನು ಕೆಳಗಿನಂತೆ ನೀಡಲಾಗಿದೆ.

ವಸತಿ ಶಾಲೆಯಲ್ಲಿ ಶೈಕ್ಷಣಿಕ ಶ್ರೇಷ್ಠತೆಯನ್ನು ಹೊಂದಿದ್ದು. ಹಾಗೆಯೇ ವಿದ್ಯಾರ್ಥಿಗಳಲ್ಲಿ ಕಲಿಕೆಯಲ್ಲಿ ತಲ್ಲೀಣಗೊಳಿಸುತ್ತವೆ. ಏಕೆಂದರೆ ಇಲ್ಲಿ ವಿದ್ಯಾರ್ಥಿಗಳು ಕ್ಯಾಂಪಸ್‌ನಲ್ಲಿ ಹೆಚ್ಚಿನ ಸಮಯವನ್ನು ಕಳೆಯುತ್ತಾರೆ. ಇದು ಅವರಿಗೆ ಸಹಜವಾಗಿ ಅಧ್ಯಯನ ಮತ್ತು ಶೈಕ್ಷಣಿಕ ಚಟುವಟಿಕೆಗಳಲ್ಲಿ ಆಳವಾಗಿ ತೊಡಗಿಸಿಕೊಳ್ಳುವಿಕೆಗೆ ಅವಕಾಶ ನೀಡುತ್ತದೆ. ಈ ವಸತಿ ಶಾಲೆಗಳು ಮುಂದುವರಿದು ರಚನಾತ್ಮಕ ಪರಿಸರವನ್ನು ನಿರ್ಮಾಣ ಮಾಡುತ್ತವೆ. ಇವು ವಿದ್ಯಾರ್ಥಿಗಳಿಗೆ ಶಿಸ್ತುಬದ್ಧ ಅಧ್ಯಯನದ ಜೊತೆ ವಿಷಯಗಳ ಗೊಂದಲವನ್ನು ಕಡಿಮೆ

ಮಾಡುತ್ತವೆ. ನಂತರ ಇವು ಕೇಂದ್ರೀಕೃತ ಕಲಿಕೆಗೆ ಉತ್ತೇಜಿಸುತ್ತವೆ. ವಸತಿ ಶಾಲೆಗಳು ವಿದ್ಯಾರ್ಥಿಗಳಿಗೆ ವೈಯಕ್ತಿಕ ಕಲಿಕೆಯ ಮಹತ್ವವನ್ನು ಹೊಂದಿವೆ. ಇವುಗಳು ಸಾಮಾನ್ಯವಾಗಿ ಸಣ್ಣ ತರಗತಿ ಗಾತ್ರಗಳನ್ನು ಹೊಂದಿರುತ್ತವೆ. ಇದು ಶಿಕ್ಷಕರಿಗೆ ವಿದ್ಯಾರ್ಥಿಗಳ ವೈಯಕ್ತಿಕ ಗಮನವನ್ನು ನೀಡಲು ಹೆಚ್ಚು ಅನುವು ಮಾಡಿಕೊಡುತ್ತದೆ. ಈ ಶಾಲೆಗಳಲ್ಲಿ ಉತ್ತಮ ಕಲಿಕಾ ಸಂಪನ್ಮೂಲಗಳು ದೊರೆಯುತ್ತವೆ. ಇವು ಹಗಲು ಶಾಲೆಗಳಲ್ಲಿ ಲಭ್ಯವಿಲ್ಲದ ವಿಶೇಷ ಸೌಲಭ್ಯಗಳು ಮತ್ತು ಸಂಪನ್ಮೂಲಗಳನ್ನು ಒದಗಿಸುತ್ತವೆ.

ವಸತಿ ಶಾಲೆಗಳು ಸಮಗ್ರ ಅಭಿವೃದ್ಧಿಯ ಮಹತ್ವವನ್ನು ಹೊಂದಿವೆ. ಅವು ವಿದ್ಯಾರ್ಥಿಗಳ ಜೀವನ ಕೌಶಲ್ಯಗಳನ್ನು ಬೆಳೆಸುತ್ತವೆ. ವಿದ್ಯಾರ್ಥಿಗಳು ಮನೆಯಿಂದ ದೂರ ವಾಸಿಸುವುದು ಅವರಿಗೆ ಸಮಯ ನಿರ್ವಹಣೆ, ಸಮಸ್ಯೆ ಪರಿಹಾರ ಮತ್ತು ಸ್ವಾವಲಂಬನೆಯಂತಹ ಅಗತ್ಯ ಜೀವನ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಿಕೊಳ್ಳಲು ಸಹಾಯ ಮಾಡುತ್ತವೆ. ನಂತರ ಇವುಗಳು ವಿದ್ಯಾರ್ಥಿಗಳ ಸಾಮಾಜಿಕ ಮತ್ತು ಭಾವನಾತ್ಮಕ ಬೆಳವಣಿಗೆಗೆ ಅನುಕೂಲ ಮಾಡುತ್ತವೆ. ವಸತಿ ಶಾಲೆಯಲ್ಲಿ ವಿದ್ಯಾರ್ಥಿಗಳು ಅವರ ಗೆಳೆಯರೊಂದಿಗೆ ಸಂವಹನ ನಡೆಸುವುದು ಸಹಾನುಭೂತಿ, ಸಹಕಾರ ಮತ್ತು ಸಾಮಾಜಿಕ ಕೌಶಲ್ಯಗಳನ್ನು ಬೆಳೆಸುತ್ತವೆ. ಈ ಶಾಲೆಗಳು ವಿದ್ಯಾರ್ಥಿಗಳಿಗೆ ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗುವಂತೆ ಮಾಡುತ್ತವೆ. ಸಾಮಾನ್ಯವಾಗಿ ವಸತಿ ಶಾಲೆಗಳು ವ್ಯಾಪಕ ಶ್ರೇಣಿಯ ಪಠ್ಯೇತರ ಚಟುವಟಿಕೆಗಳನ್ನು ಹೊಂದಿರುತ್ತವೆ. ಇದು ಅವರ ಸುಸಂಗತ ಅಭಿವೃದ್ಧಿಯನ್ನು ಉತ್ತೇಜಿಸುತ್ತದೆ. ಇವು ವಿದ್ಯಾರ್ಥಿಗಳ ಪಾತ್ರ ನಿರ್ವಹಣೆಯಲ್ಲಿ ಉತ್ತಮ ಮಹತ್ವವನ್ನು ಹೊಂದಿ ಅವರು ಜವಾಬ್ದಾರಿ, ಶಿಸ್ತು ಮತ್ತು ನಾಯಕತ್ವದಂತಹ ಮೌಲ್ಯಗಳನ್ನು ತುಂಬುತ್ತವೆ.

ವಸತಿ ಶಾಲೆಗಳು ಸ್ವಾತಂತ್ರ್ಯ ಮತ್ತು ಸ್ವಾವಲಂಬನೆ ಬೆಳಸುವುದರ ಜೊತೆಗೆ ಶಾಲೆಯಲ್ಲಿನ ವಸ್ತುಗಳ ಮಾಲೀಕತ್ವವನ್ನು ತೆಗೆದುಕೊಳ್ಳುವುದನ್ನು ಕಲಿಸುತ್ತವೆ. ವಸತಿ ಶಾಲೆಗಳು ವಿದ್ಯಾರ್ಥಿಗಳು ತಮ್ಮ ವಸ್ತುಗಳು ಮತ್ತು ದೈನಂದಿನ ದಿನಚರಿಗಳಿಗೆ ಜವಾಬ್ದಾರಿಯನ್ನು ತೆಗೆದುಕೊಳ್ಳುವಂತೆ ಪ್ರೋತ್ಸಾಹಿಸುತ್ತವೆ. ಇದರೊಂದಿಗೆ ವಿದ್ಯಾರ್ಥಿಗಳಲ್ಲಿ ಸ್ವಾತಂತ್ರ್ಯದ ಮನೋಭಾವನೆಯನ್ನು ಬೆಳೆಸುತ್ತವೆ. ಇವು ವಿದ್ಯಾರ್ಥಿಗಳಲ್ಲಿ ಸ್ವಾವಲಂಬನೆ ಸಾಧಿಸುವಂತೆ ಮಾಡುತ್ತವೆ. ಇವರು ಮನೆಯಿಂದ ದೂರ ವಾಸಿಸುವುದು ಭವಿಷ್ಯದಲ್ಲಿ ಅವರನ್ನು ಸ್ವತಂತ್ರ ಜೀವನದ ಸವಾಲುಗಳಿಗೆ ವಿದ್ಯಾರ್ಥಿಗಳನ್ನು ಸಿದ್ಧಪಡಿಸುತ್ತವೆ. ಅದೇ ರೀತಿಯಾಗಿ ಅವರಲ್ಲಿ ಆತ್ಮವಿಶ್ವಾಸ ನಿರ್ಮಾಣ ಮಾಡುತ್ತವೆ. ಇದು ಅವರ ದೈನಂದಿನ ಜೀವನ ಮತ್ತು ಶೈಕ್ಷಣಿಕ ಸವಾಲುಗಳನ್ನು ನ್ಯಾವಿಗೇಟ್ ಮಾಡಲು ಕಲಿಯುವುದು ಆತ್ಮ ವಿಶ್ವಾಸವನ್ನು ಹೆಚ್ಚಿಸುತ್ತದೆ.

ವಸತಿಶಾಲೆಗಳು ಸಾಂಸ್ಕೃತಿಕ ವೈವಿಧ್ಯತೆಯ ಮಹತ್ವವನ್ನು ವಿದ್ಯಾಥಿಗಳಿಗೆ ತಿಳಿಸುತ್ತವೆ. ಅದೇರೀತಿ ವಿದ್ಯಾರ್ಥಿಗಳಿಗೆ ವೈವಿಧ್ಯಮಯ ದೃಷ್ಟಿಕೋನಗಳಿಗೆ ಒಡ್ಡಿಕೊಳ್ಳುವಂತೆ ಮಾಡುತ್ತವೆ. ನಂತರ ವಿಭಿನ್ನ ಹಿನ್ನೆಲೆಯ ವಿದ್ಯಾರ್ಥಿಗಳೊಂದಿಗೆ ವಾಸಿಸುವುದರಿಂದ ಪ್ರಪಂಚದ ಅನೇಕ ಸಾಂಸ್ಕೃತಿಕ ವೈವಿಧ್ಯತೆಯ ಬಗ್ಗೆ ವಿದ್ಯಾರ್ಥಿಗಳ ತಿಳಿವಳಿಕೆಯನ್ನು ವಿಸ್ತರಿಸುತ್ತವೆ. ವಿದ್ಯಾರ್ಥಿಗಳಲ್ಲಿ ಮೌಲ್ಯವರ್ಧಿತ ಸಂವಹನ ಕೌಶಲ್ಯಗಳನ್ನು ಬೆಳಸುತ್ತವೆ. ವಿದ್ಯಾರ್ಥಿಗಳು ವಿವಿಧ ಹಿನ್ನೆಲೆಯ ಗೆಳೆಯರೊಂದಿಗೆ ಸಂವಹನ ನಡೆಸುವುದರಿಂದ ಸಂವಹನ ಕೌಶಲ್ಯಗಳನ್ನು ಸುಧಾರಿಸುತ್ತವೆ.

ವಸತಿ ಶಾಲೆಗಳು ದೇಶದ ಬೆಳವಣಿಗೆಗೆ ಅಪಾರ ಕೊಡುಗೆಯನ್ನು ನೀಡುತ್ತವೆ. ವ್ಯವಸ್ಥಿತ ಹಾಗು ಗುಣಾತ್ಮಕ ಶಿಕ್ಷಣ ನೀಡಿ ಸುಸ್ಥಿರ ನಾಗರಿಕರನ್ನು ಅಭಿವೃದ್ಧಿಪಡಿಸುತ್ತವೆ. ವಸತಿ ಶಾಲೆಗಳು ಸಮಾಜಕ್ಕೆ ಉತ್ತಮ ಕೊಡುಗೆ ನೀಡಬಲ್ಲ ಜವಾಬ್ದಾರಿಯುತ, ಸ್ವತಂತ್ರ ಮತ್ತು ಸಮರ್ಥ ವ್ಯಕ್ತಿಗಳನ್ನು ಪೋಷಿಸುತ್ತವೆ. ನಂತರ ಇವು ಉತ್ತಮ ನಾಯಕತ್ವದ ಗುಣಗಳನ್ನು ಬೆಳೆಸುತ್ತವೆ. ಇವು ರಚನಾತ್ಮಕ ವಾತಾವರಣ ಮತ್ತು ನಾಯಕತ್ವದ ಅವಕಾಶಗಳು ವಿದ್ಯಾರ್ಥಿಗಳನ್ನು ಭವಿಷ್ಯದ ನಾಯಕರಾಗಲು ಸಿದ್ಧಪಡಿಸುತ್ತವೆ. ವಸತಿ ಶಾಲೆಗಳು ವಿದ್ಯಾರ್ಥಿಯ ಶೈಕ್ಷಣಿಕ, ವೈಯಕ್ತಿಕ ಮತ್ತು ಸಾಮಾಜಿಕ ಅಭಿವೃದ್ಧಿಗೆ ಗಮನಾರ್ಹ ಕೊಡುಗೆ ನೀಡುವ ವಿಶಿಷ್ಟ ಮತ್ತು ಮೌಲ್ಯಯುತವಾದ ಶೈಕ್ಷಣಿಕ ಅನುಭವವನ್ನು ನೀಡುತ್ತವೆ. ವಿದ್ಯಾರ್ಥಿಗಳನ್ನು ಸಮಾಜದ ಸುಸ್ಥಿರ, ಜವಾಬ್ದಾರಿಯುತ ಮತ್ತು ಮೌಲ್ಯಯುತ ಕೊಡುಗೆ ನೀಡುವ ಸದಸ್ಯರನ್ನಾಗಿ ಸಿದ್ಧಪಡಿಸುತ್ತವೆ.

**ವಸತಿ ಶಾಲೆಗಳ ವಿದ್ಯಾರ್ಥಿಗಳ ಹೊಂದಾಣಿಕೆಯ ಭಾವನಾತ್ಮಕ ಸಮಸ್ಯೆಗಳು**

ಅದೇ ತಾನೇ ಮನೆಯ ಪರಿಸರದಿಂದ ತಂದೆ ತಾಯಿ ಅಣ್ಣ ಅಕ್ಕ ಅಜ್ಜ ಅಜ್ಜಿಯ ಸಾಮಾಜಿಕ ಕೌಟುಂಬಿಕ ಸಂಬಂಧಗಳನ್ನು ತೊರೆದು ವಸತಿ ಶಾಲೆಗೆ ಬಂದಾಗ ಅವರ ವರ್ತನೆಯನ್ನು ಗಮನಿಸಿದಾಗ ಅವರು ಹೊಂದಾಣಿಕೆಯ ಸಮಸ್ಯೆಗಳನ್ನು ಅನುಭವಿಸುವುದು ಕಂಡುಬರುತ್ತದೆ. ಶೈಕ್ಷಣಿಕ ಸಮಸ್ಯೆಗಳ ಬಗ್ಗೆ ಹೇಳುವುದಾರೆ ಇಲ್ಲಿ ಪ್ರವೇಶ ಪಡೆಯುವ ಮಕ್ಕಳಲ್ಲಿ ಶೇಕಡ 80 ರಿಂದ 85ರಷ್ಟು ಮಕ್ಕಳು ಕನ್ನಡ ಮಾಧ್ಯಮದಿಂದ ಬಂದಿರುತ್ತಾರೆ. ಆದ್ದರಿಂದ ಕನ್ನಡ ಮಾಧ್ಯಮದಿಂದ ಇಂಗ್ಲಿಷ್ ಮಾಧ್ಯಮಕ್ಕೆ ಭಾಷಾ ಕೌಶಲ್ಯದ ಹೊಂದಾಣಿಕೆಯ ಸಮಸ್ಯೆಯನ್ನು ಅನುಭವಿಸುತ್ತಾರೆ. ಹಾಗೆಯೇ ಇವರುಗಳು ಅವಲಂಬನೆಯ ಜೀವನದಿಂದ ಸ್ವಾವಲಂಬನೆಯ ಜೀವನವನ್ನು ಅನುಸರಿಸಬೇಕಾಗುತ್ತದೆ. ಅಂದರೆ ಊಟ ವಸತಿ ಬಟ್ಟೆ ಶಿಕ್ಷಣ ಆರೋಗ್ಯ ನೈರ್ಮಲ್ಯ ಸುಚಿತ್ವದ ಬಗ್ಗೆ ತಾವೇ ಪಾಲನೆ ಮಾಡಬೇಕಾಗುತ್ತದೆ.

ಆ ಸಂದರ್ಭದಲ್ಲಿ ವಿದ್ಯಾರ್ಥಿಗಳು ತಮ್ಮ ಮನಸ್ಸಿನ ಭಾವನೆಗಳು ವಿಭಿನ್ನವಾಗಿರುತ್ತವೆ. ಪ್ರಾರಂಭದಲ್ಲಿ ಅವರು ಸ್ವಾತಂತ್ರ್ಯವಾದ ಆಟ ಓದಿನಿಂದ ಸಂಗಾತಿ ಸಹಪಾಠಿಗಳ ಕೂಟಗಳು ಬದಲಾಗುತ್ತವೆ. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳ ನಿರ್ದಿಷ್ಟ ಉದ್ದೇಶಗಳ ಚೌಕಟ್ಟಿನಲ್ಲಿ ಕಲಿಯಬೇಕಾಗುತ್ತದೆ. ಈಗಾಗಲೇ ಹೇಳಿದಂತೆ ಅವರು ಪ್ರಮುಖವಾಗಿ ಹೊಂದಾಣಿಕೆಯ ಸಮಸ್ಯೆಯನ್ನು ಅನುಭವಿಸುತ್ತಾರೆ. ಇದು ಅವರಿಗೆ ಮನೆಯ ವಾತಾವರಣದಂತೆ ಇರದೆ ಶಾಲೆಯಂತೆ ಅನಿಸುತ್ತದೆ. ಇಲ್ಲಿ ಏಕಕಾಲದಲ್ಲಿ ಅವರಿಗೆ ಮನೆ ಮತ್ತು ಶಾಲೆಯ ಕಾರ್ಯ ಚಟುವಟಿಕೆಗಳು ಕಂಡುಬರುತ್ತವೆ.

ಪ್ರಾರಂಭದಲ್ಲಿ ಆರನೇ ತರಗತಿಗೆ ಬಂದ 11 ಅಥವಾ 12 ವಯಸ್ಸಿನ ವಿದ್ಯಾರ್ಥಿಗಳ ಮನೋಶಾಸ್ತ್ರಜ್ಞರು ಹೇಳಿದಂತೆ ಕೆಲವು ಭಾವನೆಗಳು ತುಮುಲಗಳು ಕಾಡುತ್ತವೆ. ಅಂದರೆ ತಂದೆ ತಾಯಿ ಹಾಗೂ ಸಂಬಂಧಿಕರು ಅಗಲಿಕೆಯ ನೋವು ಕಾಡುತ್ತವೆ.

ಇಂತಹ ವಸತಿ ಶಾಲೆಯಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳು ಶೈಕ್ಷಣಿಕ ಮತ್ತು ಮಾನಸಿಕ ತೊಳಲಾಟಗಳನ್ನು ಅನುಭವಿಸುತ್ತಿರುವುದು ಕಂಡು ಬಂದಿರುತ್ತದೆ. ಅವುಗಳೆಂದರೆ ವಿದ್ಯಾರ್ಥಿಗಳ ಭಾವನೆಯಲ್ಲಿ ಮೊದಮೊದಲ ಬಂಧನ ರೀತಿಯಾಗಿ ಕಂಡುಬಂದಿರುತ್ತದೆ. ನಂತರದಲ್ಲಿ ಹೊಂದಾಣಿಕೆಯನ್ನು ಮಾಡಿಕೊಳ್ಳುತ್ತಾರೆ. ಕೆಲ ವಿದ್ಯಾರ್ಥಿಗಳು 6ನೇ ತರಗತಿಗೆ ಪ್ರವೇಶ ಪಡೆದು ಶಾಲೆಗೆ ಬಂದಾಗ ಅವರಿಗೆ

ಹೊಸ ವಾತಾವರಣವಾಗಿ ಕಂಡುಬಂದು ಹೊಂದಾಣಿಕೆ ಸಮಸ್ಯೆಯಿಂದ ಶಾಲೆಯಿಂದ ಹೊರಗಡೆ ಹೋಗುವ ಪ್ರಯತ್ನ ಮಾಡುತ್ತಾರೆ. ನಂತರ ಶಾಲೆಯ ಪ್ರಾಂಶುಪಾಲರು ಮತ್ತು ಶಿಕ್ಷಕ ಸಿಬ್ಬಂದಿಯವರ ನಿಲಯ ಪಾಲಕರ ನೆರವಿನೊಂದಿಗೆ ಹೊಂದಾಣಿಕೆ ಆಗುತ್ತಾರೆ.

ಈ ವಸತಿ ಶಾಲೆಗಳ ಘನ ಉದ್ದೇಶಗಳಿಗೆ ಅನುಗುಣವಾಗಿ ಕಾರ್ಯನಿರ್ವಹಿಸುತ್ತಿವೆ. ವಿದ್ಯಾರ್ಥಿಗಳಿಗೆ ಶಿಕ್ಷಣ, ಆರೋಗ್ಯ, ಆಟ, ಕಲೆ, ಕೌಶಲ್ಯ ಆಧಾರಿತ ಶಿಕ್ಷಣ ನೀಡುವುದು ಇವುಗಳ ಉದ್ದೇಶವಾಗಿರುತ್ತದೆ. ಅವೆಲ್ಲವುಗಳನ್ನು ವ್ಯವಸ್ಥಿತವಾಗಿ ಶಾಲೆಯ ಪ್ರಾಂಶುಪಾಲರು ಬೋಧಕರು ಮತ್ತು ಬೋಧಕೇತರ ಸಿಬ್ಬಂದಿಯವರು ಸಮರ್ಪಕವಾಗಿ ನಿರ್ವಹಿಸುತ್ತಾರೆ.

ಇಂತಹ ವಿದ್ಯಾರ್ಥಿಗಳ ಮಾನಸಿಕ ಖಿನ್ನತೆಯನ್ನು ವಸತಿ ಶಾಲೆಯ ಪ್ರಾಂಶುಪಾಲರು ಹಾಗೂ ನಿಲಯ ಪಾಲಕರು ಮತ್ತು ಶಿಕ್ಷಕರು ಸಿಬ್ಬಂದಿ ವರ್ಗದವರು ಅಂತಹ ಭಾವನೆಗಳನ್ನು ಹಂತಹಂತವಾಗಿ ದೂರ ಮಾಡುತ್ತಾರೆ. ಅವರಿಗೆ ಪಾಠ ಪ್ರವಚನದ ಜೊತೆಗೆ ಧೈರ್ಯ ಮತ್ತು ನಂಬಿಕೆ ಆತ್ಮಾವಿಶ್ವಾಸ ಹಾಗೂ ಕಲಿಕೆಯ ಮಹತ್ವದ ಬಗ್ಗೆ ತಿಳಿವಳಿಕೆಯನ್ನು ಬೋಧಿಸುತ್ತಾರೆ. ಇದರ ಜೊತೆಯಲ್ಲಿ ಆಟ ಕಲೆ ಸಂಗೀತ ಕಂಪ್ಯೂಟರ್ ಜ್ಞಾನ ಕಲಿಸುತ್ತಾರೆ.

ಈ ಸಂದರ್ಭದಲ್ಲಿ ಕೆಲವು ವಿದ್ಯಾರ್ಥಿಗಳು ಬಹಳ ಬೇಗ ಹೊಂದಾಣಿಕೆಯನ್ನು ಹೊಂದುತ್ತಾರೆ. ಮತ್ತೆ ಕೆಲವು ಮಕ್ಕಳು ನಿಧಾನವಾಗಿ ಹೊಂದಾಣಿಕೆಯನ್ನು ಹೊಂದುತ್ತಾರೆ. ಇನ್ನು ಒಂದು ಅಥವಾ ಎರಡು ವಿದ್ಯಾರ್ಥಿಗಳು ತುಂಬಾ ಮನೆಯ ಹೊಂದಾಣಿಕೆ ಹೊಂದಿದವರು ಶಾಲೆಯನ್ನು ಬಿಟ್ಟು ಹೋಗುವ ನಿರ್ಧಾರ ಮಾಡುತ್ತಾರೆ. ಅವರಿಗೆ ಇಲ್ಲಿಯ ವಾತಾವರಣ ಹೊಂದಿಕೊಳ್ಳಲು ಕಷ್ಟವಾಗಿರುತ್ತದೆ. ಇವು ವಿದ್ಯಾರ್ಥಿಗಳ ಮನದಾಳದಲ್ಲಿನ ತುಮಲಗಳಾಗಿರುತ್ತವೆ ಅಂತಿಮವಾಗಿ ಇಂತಹ ವಿದ್ಯಾರ್ಥಿಗಳನ್ನು ಅವರ ಪೋಷಕರಿಗೆ ಒಪ್ಪಿಸುತ್ತಾರೆ.

ಇಲ್ಲಿ ವಿದ್ಯಾರ್ಥಿಗಳನ್ನು ನಿರ್ದಿಷ್ಟ ಉದ್ದೇಶಗಳ ಕಲಿಕೆಗೆ ಅಣಿಗೊಳಿಸುವುದು ಒಂದು ಸವಾಲಿನ ಕಾರ್ಯವಾಗಿರುತ್ತದೆ. ಅವರ ಸಾಂಪ್ರದಾಯಿಕ ಕಲಿಕೆಯ ಮನೋಭಾವನೆಗಳನ್ನು ಹಂತ ಹಂತವಾಗಿ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವುದರ ಮೂಲಕ ಕಡಿಮೆ ಮಾಡುತ್ತಾರೆ. ನಂತರ ವಿದ್ಯಾರ್ಥಿಗಳು ವಸತಿ ಶಾಲೆಯ ಆಚರಣೆ ರೂಢಿ ಅಭ್ಯಾಸಗಳನ್ನು ಕಲಿಯಲು ಸಿದ್ದರಾಗುತ್ತಾರೆ. ಸುಮಾರು 80 ರಿಂದ 85 ರಷ್ಟು ವಿದ್ಯಾರ್ಥಿಗಳು ಕನ್ನಡ ಮಾಧ್ಯಮದಲ್ಲಿ ಕಲಿತು ಬಂದವರಾಗಿರುತ್ತಾರೆ. ಹಾಗಾಗಿ ಇಲ್ಲಿನ 6ನೇ ತರಗತಿಯಲ್ಲಿ ಇಂಗ್ಲಿಷ್ ಮಾಧ್ಯಮದ ಕಲಿಕೆಗೆ ಅಣಿಮಾಡುತ್ತಾರೆ. ಆಗ ವಿದ್ಯಾರ್ಥಿಗಳ ಭಾವನೆಗಳಲ್ಲಿ ಇಂಗ್ಲಿಷ್ ಮಾಧ್ಯಮ ತೀರ ಕಷ್ಟದಾಯಕವಾದ ಎನ್ನುವ ಭಾವನೆಯಲ್ಲಿ ಇರುತ್ತಾರೆ. ನಂತರದ ತರಗತಿಗಳಲ್ಲಿ ಇಂಗ್ಲಿಷ್ ಮಾಧ್ಯಮದ ಬೋಧನೆಯನ್ನು ನಿಧಾನವಾಗಿ ಅರ್ಥ ಮಾಡಿಕೊಂಡ ವಿದ್ಯಾರ್ಥಿಗಳು ಈ ಹೊಂದಾಣಿಕೆಯ ಸಮಸ್ಯೆಯಿಂದ ಹೊರ ಬರುತ್ತಾರೆ. ಅದೇ ರೀತಿ ಇನ್ನೂ ಕೆಲ ವಿದ್ಯಾರ್ಥಿಗಳು ಕಲಿಕೆಯಲ್ಲಿ ಹಿಂದುಳಿದಿರುತ್ತಾರೆ. ಅವರಿಗೆ ಪರಿಹಾರ ಬೋಧನೆಯನ್ನು ಕೈಗೊಳ್ಳುತ್ತಾರೆ. ಬೆಳಿಗ್ಗೆ ಮತ್ತು ಸಂಜೆ ಆಟದ ನಂತರ ಸ್ಟಡಿಟೈಮ್‌ನಲ್ಲಿ ಶಿಕ್ಷಕರು ಅವರ ಸಮಸ್ಯೆಗಳನ್ನು ಹೊಂದಾಣಿಕೆಯಿಂದ ಅರ್ಥ ಮಾಡಿಕೊಂಡು ಅವುಗಳಿಗೆ ಪರಿಹಾರಗನ್ನು ತಿಳಿಸುತ್ತಾರೆ

ವಿದ್ಯಾರ್ಥಿಗಳಿಗೆ ಮಾತೃಭಾಷೆಯ ಮಿತಿಯ ಅರಿವಿನ ವಿಷಯ ಜ್ಞಾನವನ್ನು ಕಲಿಸಲಾಗುತ್ತದೆ. ವಿದ್ಯಾರ್ಥಿಗಳು ತಮ್ಮ ತಮ್ಮ ವಿಷಯವಾರು ಅಧ್ಯಯನವನ್ನು ಮಾಡುತ್ತಾರೆ. ಅಧ್ಯಯನದ ಸಂದರ್ಭದಲ್ಲಿ ಕಂಡುಬಂದ ಸಂಶಯಗಳನ್ನು ಶಿಕ್ಷಕರಲ್ಲಿ ಕೇಳಿ ಅವುಗಳಿಗೆ ಪರಿಹಾರ ಕಂಡುಕೊಳ್ಳುತ್ತಾರೆ. ವಿದ್ಯಾರ್ಥಿಗಳು ಮನೆಯಿಂದ ದೂರ ಉಳಿದು ಅವರ ಶಿಕ್ಷಣ ಕಲಿಕೆ ಶಿಸ್ತು ವ್ಯಕ್ತಿತ್ವ ವಿಕಸನದಂತಹ ವಿಷಯಗಳಲ್ಲಿ ಜ್ಞಾನ ಪಡೆಯುತ್ತಾರೆ. ಒಂದು ನಿರ್ದಿಷ್ಟ ಶಾಲಾ ಪರಿಸರದಲ್ಲಿ ಅನ್ಯ ತೊಂದರೆ ಇಲ್ಲದೆ ಶಿಕ್ಷಣದ ಜೊತೆ ಒಳ್ಳೆಯ ಆರೋಗ್ಯವನ್ನು ಹೊಂದುತ್ತಾರೆ. ಹೆಚ್ಚು ಸ್ವಯಂ ಅಧ್ಯಯನದಲ್ಲಿ ತೊಡಗಿಸಿಕೊಂಡು ಹೆಚ್ಚಿನ ಜ್ಞಾನವನ್ನು ಪಡೆಯುತ್ತಾರೆ. ಪ್ರಾರಂಭದಲ್ಲಿ ಬಂದಾಗ ಆವರ ಹೊಂದಾಣಿಕೆಯ ಸಮಸ್ಯೆಯ ಭಾವನೆಗಳು ಈಗ ನಿಧಾನವಾಗಿ ಕಡಿಮೆಯಾಗಿ ಸ್ವಯಂಜ್ಞಾನ ಹೆಚ್ಚಿದಂತೆ ಉತ್ತಮ ಅಭ್ಯಾಸದಲ್ಲಿ ತೊಡಗುತ್ತಾರೆ. ಏಕೆಂದರೆ ಇಲ್ಲಿ ಉತ್ತಮ ಕಟ್ಟಡ ಹಾಗೂ ಗುಣಮಟ್ಟದ ಶಿಕ್ಷಣ ಉಚಿತ ಶಿಕ್ಷಣ ವ್ಯವಸ್ಥೆಯಲ್ಲಿ ಅನುಭವಿಸುತ್ತಾರೆ. ಈ ವಸತಿಶಾಲೆಗಳಲ್ಲಿ ಅವರಿಗೆ ಖಾಸಗಿ ಶಾಲೆಯ ಅನುಭವ ಬಂದರೂ ಅವರಿಗೆ ಖಾಸಗಿ ಶಾಲೆಯ ರೀತಿಯಲ್ಲಿ ಯಾವುದೇ ಶುಲ್ಕ ಇರುವುದಿಲ್ಲ. ಇಲ್ಲಿ ಅವರಿಗೆ ಹಣದ ಕೊರತೆಯನ್ನುಂಟು ಮಾಡುವುದಿಲ್ಲ. ಹಾಗಾಗಿ ಆರ್ಥಿಕ ಹಿಂಜರಿಕೆಯೂ ಸಮಸ್ಯೆಯೂ ಕಂಡುಬರುವುದಿಲ್ಲ. ಅವರ ಪೋಷಕರಿಗೆ ಈ ವಸತಿ ಶಾಲೆಗಳು ಆರ್ಥಿಕ ಹೊರೆಯೆನಿಸುವುದಿಲ್ಲ. ವಸತಿ ಶಾಲೆಯಲ್ಲಿ ವಿದ್ಯಾರ್ಥಿಗಳ ಶಿಕ್ಷಣದ ಕಲಿಕೆ ಮತ್ತು ಅವರ ಯೋಗಕ್ಷೇಮ ತಿಳಿಯಲು ತ್ರೈಮಾಸಿಕ ಪೋಷಕರ ಸಭೆಗಳನ್ನು ಕರೆಯುತ್ತಾರೆ. ಆ ಸಭೆಗಳಲ್ಲಿ ವಿದ್ಯಾರ್ಥಿಗಳ ಕಲಿಕಾ ಪ್ರಗತಿಯನ್ನು ತಿಳಿಸುತ್ತಾರೆ. ಈ ಪಾಲಕ–ಪೋಷಕರ ಸಭೆಯನ್ನು ಕರೆಯವುದರಿಂದ ಪೋಷಕರಲ್ಲಿ ಯಾವುದೇ ರೀತಿ ತಮ್ಮ ಮಕ್ಕಳ ಬಗ್ಗೆ ಆತಂಕವಿರುವುದಿಲ್ಲ. ಇಲ್ಲಿ ಶಿಕ್ಷಕರು ಮತ್ತು ಪಾಲಕರು ತಮ್ಮ ವಿದ್ಯಾರ್ಥಿಗಳ ಕುಂದುಕೊರತೆಗಳ ಬಗ್ಗೆ ಚರ್ಚಿಸುತ್ತಾರೆ. ಅವುಗಳಿಗೆ ಪರಿಹಾರಗಳನ್ನು ಕಂಡುಕೊಳ್ಳುತ್ತಾರೆ. ಈ ಸಂದರ್ಭದಲ್ಲಿ ಉತ್ತಮ ಪ್ರಗತಿ ಪಡೆದ ವಿದ್ಯಾರ್ಥಿಗಳಿಗೆ ಪ್ರಶಂಸೆಯನ್ನು ವ್ಯಕ್ತಪಡಿಸಲಾಗುತ್ತದೆ.

ವಸತಿ ಶಾಲೆಯಲ್ಲಿ ಜಿಲ್ಲೆಯ ಎಲ್ಲಾ ಭಾಗ ಹಾಗೂ ತಾಲೂಕುಗಳಿಂದ ವಿದ್ಯಾರ್ಥಿಗಳು ಅಭ್ಯಾಸ ಮಾಡುವುದಕ್ಕೆ ಬಂದಿರುತ್ತಾರೆ. ಅದೇ ರೀತಿಯಾಗಿ ಸಮಾಜದ ಎಲ್ಲಾ ವರ್ಗದ ಮಕ್ಕಳು ಬಂದಿರುತ್ತಾರೆ. ಇಲ್ಲಿ ಎಲ್ಲರೂ ಸಹ ಒಂದೇ ಶಿಕ್ಷಣ ಒಂದೇ ಶಿಸ್ತು ಮತ್ತು ಹೊಂದಾಣಿಕೆಯನ್ನು ಹೊಂದುತ್ತಾರೆ. ವಸತಿ ಶಾಲೆ ಎಂದರೆ ವಿದ್ಯಾರ್ಥಿಗಳು ಹಾಸ್ಟೆಲ್‌ನಲ್ಲಿ ಉಳಿದುಕೊಂಡು ತಮ್ಮ ಅಧ್ಯಯನವನ್ನು ಮುಂದುವರಿಸುವ ವಸತಿ ಶಾಲೆ ಆಗಿರುತ್ತದೆ. ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಒಂದೇ ಕಾಂಪೌಂಡಿನ ಒಳಗಡೆ ಇರುವುದರಿಂದ ಶಿಕ್ಷಕರು ಸಹ ವಿದ್ಯಾರ್ಥಿಗಳೊಂದಿಗೆ ನಿರ್ದಿಷ್ಟ ಶಾಲಾ ಕ್ಯಾಂಪಸ್‌ನಲ್ಲಿ ವಾಸಿಸುತ್ತಾರೆ. ಇಲ್ಲಿ ವಿದ್ಯಾರ್ಥಿ ಮತ್ತು ಶಿಕ್ಷಕರ ಸಂಬಂಧಗಳು ಹೆಚ್ಚು ಅನ್ಯೋನ್ಯವಾಗಿರುತ್ತವೆ. ವಿದ್ಯಾರ್ಥಿಗಳು ದಿನದ 24 ಗಂಟೆ, ವಾರದ ಏಳು ದಿನಗಳು ಶಾಲೆಯ ವಸತಿ ನಿಲಯಗಳಲ್ಲಿಯೇ ಇದ್ದು ಅಧ್ಯಯನದಲ್ಲಿ ತೊಡಗುತ್ತಾರೆ. ಇಲ್ಲಿ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಾಸನದ ಜೊತೆಗೆ ಉತ್ತಮ ನಾಗರಿಕ ಗುಣ ಮತ್ತು ಮೌಲ್ಯಗಳು ಕಲಿತು ಪರಿಕ್ಷೆಗಳಲ್ಲಿ ಉತ್ತಮ ಅಂಕಗಳನ್ನು ಪಡೆಯುತ್ತಾರೆ.

ಅದೇ ರೀತಿ ಅವರ ಶೈಕ್ಷಣಿಕ ಚಟುವಟಿಕೆಗಳು ಉತ್ತಮವಾಗಿ ಕಂಡುಬಂದಿದ್ದು, ನಂತರದಲ್ಲಿ ಇವರು ಹತ್ತನೇ ತರಗತಿಯಲ್ಲಿ ಹೆಚ್ಚು ಅಂಕಗಳನ್ನು ಪಡೆದುಕೊಳ್ಳುತ್ತಾರೆ. ಮುಂದಿನ ಪ್ರಥಮ ಪಿಯುಸಿಯಲ್ಲಿ

ಉತ್ತಮ ಕಾಲೇಜುಗಳ ಆಯ್ಕೆ ಮತ್ತು ಕೋರ್ಸುಗಳ ಆಯ್ಕೆಯನ್ನು ಮಾಡಿಕೊಳ್ಳುತ್ತಾರೆ. ಅವುಗಳನ್ನು ಮುಗಿಸಿ ಉತ್ತಮ ಡಿಗ್ರಿ ಮತ್ತು ವಿಜ್ಞಾನ ತಂತ್ರಜ್ಞಾನಗಳಲ್ಲಿ ಪದವಿ ಮುಗಿಸುತ್ತಾರೆ. ಹಾಗೆಯೇ ಪ್ರತಿಷ್ಠಿತ ಸಂಸ್ಥೆಗಳಾದ ಐಐಟಿಯಲ್ಲಿ ಪ್ರವೇಶವನ್ನು ಪಡೆದು ವ್ಯಾಸಂಗ ಮಾಡುವವರಿದ್ದಾರೆ. ಈ ಶಾಲೆಗಳು ಬಡ ಹಾಗೂ ಆರ್ಥಿಕವಾಗಿ ಹಿಂದುಳಿದ ಎಷ್ಟೋ ಅನಾಥ ಮಕ್ಕಳಿಗೆ ಜ್ಞಾನಪಡೆಯುವ ವಸತಿ ಶಾಲೆಗಳಾಗಿವೆ. ಒಟ್ಟಾರೆ ಪ್ರಾಚೀನ ಕಾಲದಲ್ಲಿ ವಿದ್ಯಾಭ್ಯಾಸವು ಜ್ಞಾನ ಸಂಪಾದನೆಯ ಮೂಲಕ ವೃತ್ತಿಗಾಗಿ ಪಡೆಯುತ್ತಿದ್ದರು. ಇಂದು ಜ್ಞಾನಸಂಪಾದನೆ ಜೊತೆಗೆ ಜೀವನ ನಿರ್ವಹಣೆಯನ್ನು ಕಲಿಯುತ್ತಾರೆ. ಇಲ್ಲಿ ಕಲಿತ ವಿದ್ಯಾರ್ಥಿಗಳು ಒಳ್ಳೆಯ ಜೀವನಶೈಲಿಯನ್ನು ಹೊಂದುತ್ತಾರೆ ಎನ್ನುವುದರಲ್ಲಿ ಅನುಮಾನವಿಲ್ಲ ಎನ್ನುತ್ತಾರೆ ಶಿಕ್ಷಣ ಚಿಂತರು.

**ಉಪಸಂಹಾರ**

ಈ ಮೇಲಿನ ವಿಷಯಗಳ ಪರಾಮರ್ಶೆಯ ಕೊನೆಯಲ್ಲಿ ಗ್ರಹಿಸಲಾದ ಅಂಶಗಳು ಈ ರೀತಿ ಇವೆ. ವಸತಿ ಶಾಲೆಗಳು ವಿದ್ಯಾರ್ಥಿಗಳ ಶಿಕ್ಷಣ ಹಾಗೂ ಗುಣಮಟ್ಟದ ಹಿನ್ನೆಲೆಯಲ್ಲಿ ವಿಶೇಷವಾಗಿ ಕಂಡುಬರುತ್ತವೆ. ತ್ರೈಮಾಸಿಕ ಪೋಷಕರ ಸಭೆಗಳಿಂದ ವಿದ್ಯಾರ್ಥಿ ಶಿಕ್ಷಕ ಪಾಲಕ ಸಮುದಾಯ ಸಹಭಾಗಿತ್ವ ಹಾಗೂ ನಿರ್ಧಿಷ್ಟ ಉದ್ದೇಶಗಳು ಈಡೇರುತ್ತವೆ. ವಿದ್ಯಾರ್ಥಿಗಳ ಹೊಂದಾಣಿಕೆ ಸಮಸ್ಯೆ ವಸತಿ ಶಾಲೆಯಲ್ಲಿ ಕಡಿಮೆಯಾಗುತ್ತವೆ. 1986ರಲ್ಲಿ ಜಾರಿಗೆ ಬಂದ ನೂತನ ಶಿಕ್ಷಣ ನೀತಿಯ ಭಾಗವಾಗಿ ಆರಂಭವಾದ ಕೇಂದ್ರ ಸರ್ಕಾರದ ಜವಾಹರ್ ನವೋದಯ ಮಾದರಿ ವಸತಿ ಶಾಲೆಗಳ ರೀತಿಯಲ್ಲಿ ಕರ್ನಾಟಕ ಸರ್ಕಾರ ಆರಂಭಿಸಿರುವ 1996ರ ನಂತರ ಸ್ಥಾಪಿಸಿರುವ ಮೊರಾರ್ಜಿ ದೇಸಾಯಿ ಹಾಗೂ ಇತರೆ ವಸತಿ ಶಾಲೆಗಳ ಕಾರ್ಯವೈಖರಿಯು ತುಂಬಾ ಉತ್ತಮವಾಗಿವೆ ಎಂದು ಹೇಳಬಹುದು.

**ಪರಾಮರ್ಶನ ಗ್ರಂಥಗಳು**


- ಮಹಾತ್ಮ ಗಾಂಧಿ. (1910). *ಹಿಂದು ಸ್ವರಾಜ್ ಫೋನೆಕ್ಸ್.* ಪಬ್ಲಿಕೇಶನ್ ಇನ್ ನೆಟಲ್.
- ಮಿಡತಲ ರಾಣಿ. (2014). *ಟ್ರೆಬಲ್ ಎಜುಕೇಶನ್.* ಸೀರಿಯಲ್ ಪಬ್ಲಿಕೇಶನ್.
- ರಾಜೇಂದ್ರ ಪ್ರಸಾದ್ ದುಬಾಲ್. (2024). *ರೆಸಿಡೆನ್ಷಿಯಲ್ ಸ್ಕೂಲ್–ಏ ಹೋಮ್ ವೇ ಫ್ರಮ್ ಹೋಮ್.* ನೇಷನ್ ಪ್ರೆಸ್ ಮಿಡಿಯಾ ಪ್ರೈವೇಟ್ ಲಿಮಿಟೆಡ್.
- ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವಸತಿ ಶಾಲಾ ನಿರ್ವಹಣಾ ಕೈಪಿಡಿ ಪುಸ್ತಕ – 2014–15. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು
- ವಾಮದೇವಪ್ಪ, ಎಚ್.ವಿ. *ಶೈಕ್ಷಣಿಕ ಮನೋವಿಜ್ಞಾನ.* ಶ್ರೇಯಸ್ ಪಬ್ಲಿಕೇಶನ್